ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಶ್ರೀರಂಗಪಟ್ಟಣ

ಸಿಸಿ 14/2019 ಸಿಡಬ್ಲ್ಯೂ : 1 ಪಿ ಡಬ್ಲ್ಯೂ : 1

| | |
|---|---|
| ಹೆಸರು | ಚಾಂದ್ ಪಾಷಾ |
| ತಂದೆಯ ಹೆಸರು | ಅಬ್ದುಲ್ ರಶೀದ್ |
| ವಯಸ್ಸು | 47 ವರ್ಷ |
| ವೃತ್ತಿ | ವಿಡಿಯೋ ಗ್ರಾಫರ್ |
| ವಾಸ | ಬಾಲಾಜಿ ನಗರ, ಬೆಂಗಳೂರು |

ದಿನಾಂಕಃ 19.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 2 ರಿಂದ 8 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ.
2. ದಿಃ 12.07.2018 ರಂದು 3.30 ಗಂಟೆಗೆ ಗಂಜಾಂ 2 ನೇ ಮುಖ್ಯ ರಸ್ತೆಯಲ್ಲಿರುವ ಮನೆಯಲ್ಲಿ ನಾವು ನೆಂಟರು ಸೇರಿಕೊಂಡಿದ್ದೆವು. ನಮ್ಮ ಮನೆಯ ಮುಂದೆ ನಮ್ಮದೇ ಖಾಲಿ ಜಾಗ ಇದ್ದು, ಅದರಲ್ಲಿ ಅಕ್ರಮವಾಗಿ ಅಸೀಜ್ ಖಾನ್ ಶೆಡ್ಡು ಹಾಕಿದ್ದರು. ನಾವು ಅಂದರೆ ನಾನು ಮತ್ತು ಚಾಸಾ 2 ರಿಂದ 6 ಹೋಗಿ ವಿಚಾರಿಸಿದಾಗ ಇದು ಜಾಗ ನಮ್ಮದು ಎಂದು 2 ನೇ ಆರೋಪಿಯು ಹೇಳಿರುತ್ತಾರೆ. ಅದೇ ಪ್ರಕಾರ 1 ನೇ ಆರೋಪಿ ಮತ್ತು 4 ನೇ ಆರೋಪಿಯು ಸಹ ಜಾಗ ನಮ್ಮದು ಎಂದು ಹೇಳಿರುತ್ತಾರೆ. ಸದರಿ ಜಾಗಕ್ಕೆ ಸಂಬಂಧಿಸಿದಂತೆ ಸಿವಿಲ್ ವ್ಯಾಜ್ಯಾ ಇದ್ದು, ನಾವು ಇಂಜೆಕ್ಷನ್ ಆರ್ಡರ್ ಅನ್ನು ತೋರಿಸಿದಾಗ ಆರೋಪಿತರು ಎಲ್ಲಾ ಸೇರಿ ನಮ್ಮನ್ನು ಹೊಡೆದಿರುತ್ತಾರೆ. 1 ನೇ ಆರೋಪಿ ಕಬ್ಬಿಣದ ರಾಡ್ ನಿಂದ ನನ್ನ ಎಡಗೈಗೆ ಹೊಡೆದನು. 2 ನೇ ಆರೋಪಿಯು ಕೈಯಿಂದ ನನ್ನ ಮೈ ಮೇಲೆ ಹೊಡೆದನು. 3 ನೇ ಆರೋಪಿಯು ನನ್ನ ಅಣ್ಣನಾದ ಚಾಸಾ 2 ರವರಿಗೆ ರಾಡ್

ನಿಂದ ಬಲಗೈಗೆ ಹೊಡೆದಿರುತ್ತಾರೆ. ನನಗೂ ಮತ್ತು ಚಾಸಾ 2 ರವರಿಗೆ ಪ್ರಾಕ್ಚರ್ ಆಗಿರುತ್ತದೆ. ಚಾಸಾ 2 ರವರಿಗೆ ಹೊಲಿಗೆ ಸಹ ಹಾಕಿರುತ್ತಾರೆ. ಚಾಸಾ 2 ರವರಿಗೆ 1 ನೇ ಆರೋಪಿಯು ಕೈಯಿಂದ ಬೆನ್ನಿಗೆ ಹೊಡೆದರು. ಚಾಸಾ 4 ರವರಿಗೆ 4 ನೇ ಆರೋಪಿಯು ದೊಣ್ಣೆಯಿಂದ ಬಲಗೈಗೆ ಹೊಡೆದನು. ಆತನ ಕೈ ಊದಿಕೊಂಡಿತ್ತು. ಚಾಸಾ 3 ರವರಿಗೆ 2 ನೇ ಆರೋಪಿಯು ಹಾಗೂ 4 ನೇ ಆರೋಪಿಯು ಬಲಗೈಗೆ ಹೊಡೆದರು. ಚಾಸಾ3 ರವರ ಕೈ ಊದಿಕೊಂಡಿತ್ತು. ಚಾಸಾ 5 ಮತ್ತು 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಮ್ಮ 4 ಜನರನ್ನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಟ್ಟು ನವಮ್ಮನ್ನು ಕೆ ಆರ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನನಗೆ ಎಕ್ಸ್ ರೇ ತೆಗೆದಿರುತ್ತಾರೆ. ನನಗೆ ಫ್ರಾಕ್ಚರ್ ಆಗಿತ್ತು. ಚಾಸಾ 2 ರವರ ಕೈಗೆ ಹೊಲಿಗೆಯಾಗಿರುತ್ತಾರೆ. ಚಾಸಾ 3 ರವರಿಗೆ ಸೂಕ್ತ ಚಿಕಿತ್ಸೆ ನೀಡಿರುತ್ತಾರೆ. ನನಗೆ ಫ್ರಾಕ್ಚರ್ ಆಗಿದ್ದು, ಹೆಚ್ಚಿನ ಚಿಕಿತ್ಸೆಯನ್ನು ನಾನು ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ. ಅದೇ ದಿನ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ.

3. ದಿಃ 13.07.2018 ರ ಬೆಳಗಿನ 9 ಗಂಟೆಗೆ ಘಟನಾ ಸ್ಥಳಕ್ಕೆ ಪೊಲೀಸರು ಮಹಜರ್ ಮಾಡಲು ಬಂದಿದ್ದರು. ಸದರಿ ಮಹಜರ್ ಅನ್ನು ಬೆಳಗಿನ 9 ರಿಂದ 9.45 ವರೆಗೂ ಮಾಡಿರುತ್ತಾರೆ. ನಾನು ನಮಗೆ ಹೊಡೆದ ರಾಡ್ ಮತ್ತು ದೊಣ್ಣೆಯನ್ನು ಎತ್ತಿ ಇಟ್ಟಿದ್ದು, ಅದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡು ಸ್ಥಳದ ವಿದ್ಯಮಾನಗಳನ್ನು ನಮೂದು ಮಾಡಿರುತ್ತಾರೆ. ಸ್ಥಳ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ಪಂಚನಾಮೆಯನ್ನು ಮಾಡುವಾಗ ಚಾಸಾ 7 ಮತ್ತು 8 ಹಾಜರಿದ್ದರು. ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು,

ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ಪಂಚನಾಮೆನ್ನು ನೋಡಿ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದೊಣ್ಣೆ ಮತ್ತು ರಾಡನ್ನು ನೋಡಿ, ಅದೇ ದೊಣ್ಣೆ ಮತ್ತು ರಾಡ್ ನಿಂದ ಹಲ್ಲೆ ಮಾಡಿರುವುದಾಗಿ ನುಡಿಯುತ್ತಾರೆ. ಸದರಿ ರಾಡ್ ಅನ್ನು ಎಂ ಒ 1 ಎಂದು, ದೊಣ್ಣೆಯನ್ನು ಎಂ ಒ 2 ಎಂದು ಗುರುತಿಸಲಾಗಿದೆ. ಆರೋಪಿತರು ಈ ಜಾಗಕ್ಕೆ ಪುನಃ ಬಂದರೆ ನಿಮ್ಮನ್ನು ಕೊಲ್ಲುತ್ತೇವೆ ಎಂದು ಹೇಳಿರುತ್ತಾರೆ.

ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎ ಪಿ ಪಿರವರು ಅನುಮತಿ ಕೋರುತ್ತಿದ್ದು , ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.
ಪಾಟೀ ಸವಾಲು : ಎ ಪಿ ಪಿ ರವರಿಂದಃ

4. ಆರೋಪಿತರು ನಮ್ಮನ್ನು ಕುರಿತು ಬೋಳಿ ಮಕ್ಕಳಾ ಎಂದು ಬೈದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.
ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.